ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.3360/2024

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಮಹೇಶ್** | | |
| **ತಂದೆಃಹೆಸರು** | **ರಮೇಶ್** | **ಪಿಡಬ್ಲ್ಯೂಃ** | **9** |
| **ವಯಸ್ಸು** | **22 ವರ್ಷ** | **ಸಿಡಬ್ಲ್ಯೂಃ** | **10** |
| **ಉದ್ಯೋಗಃ** | **ವಿದ್ಯಾರ್ಥಿ** | | |
| **ವಾಸ ಸ್ಥಳಃ** | **ಜವಳಗೇರಾ** | | |

**ದಿನಾಂಕ 05-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಚಾಸಾ-1, 11 & 12 ರವರ ಪರಿಚಯ ಇದೆ. ಮೃತ ಹರೀಶನ ಪರಿಚಯ ಇದೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಆತನನ್ನು ನಾನು ನೋಡಿಲ್ಲ ಎನ್ನುತ್ತಾರೆ.

ದಿ.07-09-2024 ರಂದು ಹರಿಹರ ಜಾತ್ರೆಗೆಂದು ನಾನು, ಚಾಸಾ-1, 11, 12 ಇನ್ನಿತರರು ಸೇರಿ ಕ್ರೂಷರ್‌ನಲ್ಲಿ ಹೊರಟಿದ್ದೆವು. ಸಿಂಧನೂರಿನಲ್ಲಿರುವ ಎಂ ಕೆ ಬಟ್ಟೆ ಅಂಗಡಿಯ ಬಳಿ ಗಾಡಿ ನಿಲ್ಲಿಸಿ, ನಾನು, ಚಾಸಾ-1, 11, 12 ರವರು ಎಂ ಕೆ ಬಟ್ಟೆ ಅಂಗಡಿಗೆ ಬಟ್ಟೆ ತರಲು ಹೋಗಿದ್ದೆವು. ಆಗ ಮೃತ ಹರೀಶ್ ಸಿ-ಗಂ. ಮು. ರಸ್ತೆಯನ್ನು ದಾಟುತ್ತಿದ್ದಾಗ, ರಾಯಚೂರು ಕಡೆಯಿಂದ ಒಂದು ಕ್ರೂಷರ್ ವಾಹನ ಹರಿಹರದ ಕಡೆಗೆ ಹೊರಟಿತ್ತು, ರಸ್ತೆ ದಾಟುತ್ತಿದ್ದ ಹರೀಶನಿಗೆ ಟಕ್ಕರ್ ಕೊಟ್ಟು ಅಪಘಾತ ಪಡಿಸಿತ್ತು. ನಂತರ ನಾವು ಅದನ್ನು ನೋಡಿ ಗಾಯಗೊಂಡಿದ್ದ ಹರೀಶನನ್ನು ಸ.ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿದ್ದೆವು. ಹರೀಶನನ್ನು ಸಿ.ಸ. ಆಸ್ಪತ್ರೆಯಿಂದ ಬಳ್ಳಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಆತ ಉಳಿಯುವುದಿಲ್ಲ ಕರೆದುಕೊಂಡು ಹೋಗಿ ಎಂದು ಹೇಳಿದ್ದರಿಂದ ಆತನನ್ನು ಮನೆಗೆ ಕರೆದುಕೊಂಡು ಬಂದಿದ್ದು, 1 ವಾರದ ನಂತರ ಆತ ಮೃತಪಟ್ಟಿರುತ್ತಾನೆ. ಈ ಬಗ್ಗೆ ಪೋಲೀಸರು ನನ್ನನ್ನು ವಿಚಾರಿಸಿದ್ದರು, ನಾನು ಹೇಳಿಕೆ ಕೊಟ್ಟಿದ್ದೆನು.

ಸಾಕ್ಷಿಗೆ ನ್ಯಾಯಾಲಯದಲ್ಲಿ ಲ್ಯಾಪ್ ಟಾಪ್ ಮುಖಾಂತರ ಕಡತದಲ್ಲಿದ್ದ ಸಿಡಿಗಳನ್ನು ಪ್ಲೇ ಮಾಡಿಸಿ ತೋರಿಸಲಾಗಿ, ಸಾಕ್ಷಿಯು ಅವುಗಳಲ್ಲಿರುವ ದೃಶ್ಯಾವಳಿಯನ್ನು ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ**

ನ್ಯಾಯಾಲಯದ ಮುಂದಿರುವ ಆರೋಪಿಯೇ ಆ ದಿನ ಕ್ರೂಷರ್ ವಾಹನ ಸಂ. ಕೆ ಎ 35/ಎ 4276 ನ್ನು ಅತೀವೇಗ & ನಿರ್ಲಕ್ಷತನದಿಂದ ಚಲಾಯಿಸಿಕೊಂಡು ಬಂದು ಟಕ್ಕರ್ ಕೊಟ್ಟಿದ್ದರಿಂದ ಅಪಘಾತ ಆಗಿತ್ತು ಎಂದರೆ ಸರಿ. ಆರೋಪಿಯ ಹೆಸರು ಶೇಕ್ ಹುಸೇನ್ ಬಾಬಾ, ಇಂದ್ರಾನಗರ, ಸಿಂಧನೂರು ಇದ್ದು, ಆತನನ್ನು ಗುರುತಿಸಿ ಪೋಲೀಸರಿಗೆ ಹೇಳಿಕೆ & ಮರು ಹೇಳಿಕೆಗಳನ್ನು ಕೊಟ್ಟಿದ್ದಿರಿ ಎಂದರೆ ಸರಿ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

1. ಆ ದಿನ ಜವಳಗೆರಾ ಬಿಟ್ಟಾಗ ಸಮಯ 4 ಗಂಟೆಯಾಗಿತ್ತು. ನಾವು ಸಿಂಧನೂರಿಗೆ ಬಂದಾಗ ಸಮಯ ಸಂ.4-30 ರಿಂದ 5 ಗಂಟೆಯಾಗಿರಬಹುದು. ನಾವು ಆ ದಿನ ಬಂದ ಕ್ರೂಷರ್ ವಾಹನದ ಸಂಖ್ಯೆ ನನಗೆ ನೆನಪಿಲ್ಲ.

2. ಎಂ ಕೆ ಬಟ್ಟೆ ಅಂಗಡಿಯ ಮುಂದೆ ರಸ್ತೆ ಡಿವೈಡರ್ ಇದೆ ಎಂದರೆ ಸರಿ. ಅಲ್ಲಿ ರಸ್ತೆ ದಾಟಲು ಜಾಗ ಇಲ್ಲ, ರಸ್ತೆ ದಾಟಲು ಬಿಟ್ಟ ಜಾಗದಲ್ಲಿ ಮೃತ ಹರೀಶ್ ನು ರಸ್ತೆ ದಾಟಿಲ್ಲ ಎಂದರೆ ಸರಿ.

3. ದೃಶ್ಯಾವಳಿಯಲ್ಲಿ ಕ್ರೂಷರ್ ವಾಹನದ ಸಂಖ್ಯೆ & ಅದರಲ್ಲಿದ್ದ ಜನರು ಯಾರು ಎಂದು ಗೊತ್ತಾಗುವುದಿಲ್ಲ ಎಂದರೆ ಸರಿ. ಠಾಣೆಯಲ್ಲಿ ಪೋಲೀಸರು ವಾಹನವನ್ನು ತೋರಿಸಿದ ನಂತರ ನಿಮಗೆ ಇದೇ ವಾಹನ ಎಂದು ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತ ಪಡಿಸಿದ ವಾಹನದ ಸಂಖ್ಯೆ ನನಗೆ ಗೊತ್ತಿಲ್ಲ.

4. ಹರೀಶನಿಗೆ ವಾಹನ ಟಕ್ಕರ್ ಕೊಟ್ಟಾಗ ನಾನು ಬಟ್ಟೆ ಅಂಗಡಿಯಲ್ಲಿದ್ದೆ. ಸಾಕ್ಷಿಯು ಮುಂದುವರೆದು ಆ ಅಂಗಡಿಯ ಬಾಗಿಲ ಹತ್ತಿರ ಹೊರಗೆ ಇದ್ದೆ ಎನ್ನುತ್ತಾರೆ. ನೀವು ಒಳಗೆ ಇದ್ದಿರಾ ಅಥವಾ ಹೊರಗೆ ಇದ್ದಿರಾ ಎಂದರೆ ಸಾಕ್ಷಿಯು ಮುಖ್ಯ ದ್ವಾರದ ಹತ್ತಿರ ಇದ್ದೆ ಎನ್ನುತ್ತಾರೆ. ಅಪಘಾತವಾದ ಶಬ್ದ ಕೇಳಿ ನಾವು ಹೋಗಿ ನೋಡಿದ್ದೆವು.

5. ಅಪಘಾತವಾದ ಸ್ಥಳ ರಾಜ್ಯ ಹೆದ್ದಾರಿ, ಅಲ್ಲಿ ವಾಹನ ದಟ್ಟಣೆ ಇರುತ್ತದೆ ಎಂದರೆ ಸರಿ. ಕೆಲವು ಸಲ ವಾಹನ ಡಿಕ್ಕಿ ಪಡಿಸಿ ನಿಲ್ಲಿಸದೆ ಹೋಗಿರುತ್ತವೆ ಎಂದರೆ ಸರಿ.

6. ಅಪಘಾತ ಸ್ಥಳದಲ್ಲಿದ್ದ ರಸ್ತೆ ಎಷ್ಟು ಅಡಿ ಅಗಲ ಇದೆ ಎಂದರೆ ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಎನ್ನುತ್ತಾರೆ. ಅಪಘಾತವು ರಸ್ತೆಯ ಯಾವ ಕಡೆ ಆಗಿತ್ತು ಎಂದರೆ ಸಾಕ್ಷಿಯು ಡಿವೈಡರ್ ನಿಂದ 7-8 ಅಡಿ ಅಂತರದಲ್ಲಿ ಆಗಿತ್ತು ಎನ್ನುತ್ತಾರೆ. ಡಿವೈಡರ್ ನ ಪಕ್ಕದಲ್ಲಿ ವಾಹನಗಳು ತಿರುಗಾಡಲು ಸ್ಥಳ ಇದೆ, ಜನರು ಓಡಾಡಲು ಅಲ್ಲ ಎಂದರೆ ಸರಿ.

7. ಯಾವುದೇ ವ್ಯಕ್ತಿ ರಸ್ತೆ ದಾಟುವಾಗ ರಸ್ತೆಯ ನಿಯಮಗಳನ್ನು ಪಾಲಿಸಬೇಕು ಎಂದರೆ ಸರಿ. ಮೃತ ಹರೀಶನು ರಸ್ತೆಯ ನಿಯಮ ಪಾಲನೆ ಮಾಡದೆ, ತನ್ನ ತಪ್ಪಿನಿಂದಲೇ ಅಪಘಾತ ಮಾಡಿಸಿಕೊಂಡಿದ್ದಾನೆ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ.

8. ಮೃತ ಹರೀಶನು ಬಳ್ಳಾರಿಯಲ್ಲಿ ಬಿಟ್ಟು ಬೇರೆ ಎಲ್ಲೆಲ್ಲಿ ಚಿಕಿತ್ಸೆ ಪಡೆದಿದ್ದ ಎಂದರೆ ಸಾಕ್ಷಿಯು ಸಿಂಧನೂರು, ಬಳ್ಳಾರಿಯಲ್ಲಿ ಚಿಕಿತ್ಸೆ ಪಡೆದಿದ್ದ ಎನ್ನುತ್ತಾರೆ. ಮೃತ ಹರೀಶನು ಬೆಂಗಳೂರಿನಲ್ಲಿ ಸಹ ಚಿಕಿತ್ಸೆ ಪಡೆದಿದ್ದ ಎಂದರೆ ನನಗೆ ಗೊತ್ತಿಲ್ಲ. ಆತ ಅಲ್ಲಿಂದ ಸಂಪೂರ್ಣ ಗುಣಮುಖನಾಗಿ ಡಿಸ್ಚಾರ್ಜ್ ಆಗಿದ್ದ ಎಂದರೆ ಸಾಕ್ಷಿಯು ವೈದ್ಯರು ಆತ ಉಳಿಯುವುದಿಲ್ಲ ಮನೆಗೆ ಕರೆದುಕೊಂಡು ಹೋಗಿ ಎಂದು ಹೇಳಿ ಕಳಿಸಿದ್ದರು ಎನ್ನುತ್ತಾರೆ. ಸದರಿ ವಿಷಯವನ್ನು ಪೋಲೀಸರ ಮುಂದೆ ಹೇಳಿದ್ದಿರಾ ಎಂದರೆ ಸಾಕ್ಷಿಯು ಇಲ್ಲ, ಕೊಟ್ಟಿಲ್ಲ ಎನ್ನುತ್ತಾರೆ. ಈ ಕೇಸಿನ ಸಲುವಾಗಿ ನಾನು ಪೋಲೀಸರನ್ನು ಒಂದೇ ಬಾರಿ ಭೇಟಿಯಾಗಿದ್ದೆ, ನಾನು ಠಾಣೆಗೆ ಹೋಗಿರುವುದಿಲ್ಲ.

9. ನಾನು ನನ್ನ ಹೇಳಿಕೆಯನ್ನು ಪಿ ಡಬ್ಲು ಡಿ ಕ್ಯಾಂಪಿನಲ್ಲಿ ಕೊಟ್ಟಿದ್ದೆ. ಮೃತ ಹರೀಶನನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು, ಅಲ್ಲಿ ಚಿಕಿತ್ಸೆ ಪಡೆದು ಡಿಸ್ಚಾರ್ಜ್ ಮಾಡಿಕೊಂಡು ಊರಿಗೆ ಬಂದಿದ್ದು, ಊರಿನಲ್ಲಿ ದಿ.05-10-2024 ರಂದು 1-55 ಪಿ ಎಂ ಗೆ ಪುನಃ ಗಾಯಾಳು ಮೃತ ಹರೀಶನಿಗೆ ಉಸಿರಾಟದ ತೊಂದರೆ ಆಗಿ ಸಿ.ಸ. ಆಸ್ಪತ್ರೆಗೆ ಸೇರಿಕೆ ಮಾಡಿದ್ದು ಎಂದು ಹೇಳಿಕೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಸಾಕ್ಷಿಯು ಅಲ್ಲಗಳೆದಿರುವ ಮರು ಹೇಳಿಕೆಯ ಭಾಗವನ್ನು **ನಿಡಿ-1** ಎಂದು ಗುರುತಿಸಲಾಯಿತು.

10. ಫೋಟೋಗಳನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತು. ಹರೀಶ್ ನು ಸಂಪೂರ್ಣ ಗುಣಮುಖನಾಗಿ ಆಸ್ಪತ್ರೆಯಿಂದ ಬಂದಿದ್ದು, ಉಸಿರಾಟದ ಸಮಸ್ಯೆಯಿಂದ ಆತ ಮೃತಪಟ್ಟಿದ್ದು, ಪರಿಹಾರ ಸಿಗಲಿ ಎಂದು ಪೋಲೀಸರು ಸುಳ್ಳು ಅಂತಿಮ ವರದಿ ಸಲ್ಲಿಸಿದ್ದು, ಆತನ ಕುಟುಂಬಕ್ಕೆ ಅನುಕೂಲ ಮಾಡಲು ನೀವು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

11. ಆರೋಪಿಯು ಯಾವುದೇ ಅಪಘಾತ ಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ಅತೀವೇಗ & ನಿರ್ಲಕ್ಷ್ಯತನದಿಂದ ವಾಹನ ಚಲಾಯಿಸಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ ಹರೀಶ್ ಮೃತಪಟ್ಟಿಲ್ಲ ಎಂದರೆ ಸರಿಯಲ್ಲ. ಬೇರೆ ಯಾವುದೋ ವಾಹನ ಟಕ್ಕರ್ ಕೊಟ್ಟಿದ್ದರಿಂದ ಅಪಘಾತವಾಗಿದ್ದು, ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ., ಸಿಂಧನೂರು.**